# KARNATAKA LOKAYUKTA

NO:UPLOK-1/DE/238/2019/ARE-9

M.S.Building,
Dr. B.R. Ambedkar Veedhi,
Bengaluru - 560 001.
Date: 29.11.2023

## : : ENQUIRY REPORT : :

:: Present ::
(SHUBHAVEER.B)
Additional Registrar of Enquiries -9
Karnataka Lokayukta,
Bengaluru

Sub: Departmental Enquiry against **(1) Sri.Chidanandappa.P.G., Senior Assistant Director of Horticulture, Byadagi Presently Deputy Director of Horticulture, Ballari and** (2) Sri.S.B.Pail, Assistant Horticulture Officer (now Retired) - reg.

Ref: 1. G.O.No.HD 93 ThoSeP 2019, dated: 24.9.2019

2. Nomination Order No: UPLOK-1/ DE/238/2019; dated: 1.10.2019, of Hon'ble Upalokayukta-1, Bengaluru.

* * ** ** * *

This departmental enquiry is initiated against **(1) Sri.Chidanandappa.P.G., Senior Assistant Director of Horticulture, Byadagi Presently Deputy Director of Horticulture, Ballari and** (2) Sri.S.B.Pail, Assistant Horticulture Officer (now Retired) (hereinafter referred to as the Delinquent Government Officials for short "DGO No.s 1 & 2 respectively").

2. In pursuance of the Government Order cited above at reference No.1, Hon'ble Upalokayukta, vide order, dated 1.10.2019,

as cited above, at reference No.2; has nominated Additional Registrar of Enquiries-9, to frame the charges and to conduct the enquiry against the aforesaid DGO No.s 1 and 2.

3. Additional Registrar of Enquiries-9 has issued the Articles of charges to the DGO No.s 1 and 2, enclosing statement of imputations of misconduct, list of witnesses proposed to be examined and list of documents proposed to be relied in support of the charges and called upon them to appear before the Enquiry Officer.

4. The Article of charges issued by the ARE-9, against the DGO No.s 1 and 2 is as shown infra :

## ANNEXURE-I
## CHARGE

ಆಸನೌ ನಂ;1– ಶ್ರೀ.ಚಿದಾನಂದಪ್ಪ.ಪಿ.ಜಿ., ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಬ್ಯಾಡಗಿ, (ಪ್ರಸ್ತುತ ತೋಟಗಾರಿಕೆ ಉಪ ನಿರ್ದೇಶಕರು, ಬಳ್ಳಾರಿ) ಹಾಗೂ (2) ಶ್ರೀ.ಎಸ್.ಬಿ.ಪಾಟೀಲ, ಸಹಾಯಕ ತೋಟಗಾರಿಕೆ ಅಧಿಕಾರಿ (ನಿವೃತ್ತ) ಆದ ನೀವು

1) ದೂರುದಾರರು ಮತ್ತು ಅವರ ಸಹೋದರ ಎಂದು ಹೇಳಲಾದ ಶ್ರೀ.ಶೇಖರಯ್ಯ ಸಾಲಿ ಹೆಸರಿನಲ್ಲಿ ಬ್ಯಾಡಗಿ ತಾಲ್ಲೂಕ್ ಕಾಗಿನೆಲೆ ಹೋಬಳಿ ಕೆರವಡಿ ಗ್ರಾಮದ ಸರ್ವೆ ನಂ.66/2ಸಿ (66/2ಕ) ರಲ್ಲಿ 3 ಎಕರೆ 15 ಗುಂಟೆ ಜಮೀನಿರುವುದು 2010–11ನೇ ಸಾಲಿನ ಪಹಣಿ ಮತ್ತು ಖಾತೆ ಉತಾರದಲ್ಲಿ ಕಂಡು ಬಂದಿದೆ. ಸಹಾಯ ಧನದ ಮೊತ್ತವನ್ನು \ ಚೆಕ್ ಅನ್ನು ದೂರುದಾರರ ಹೆಸರಿನಲ್ಲಿ ನೀಡಲು ಒಪ್ಪಿಗೆ ಇದೆಯೆಂದು ಶ್ರೀ.ಶೇಖರಯ್ಯ ಸಾಲಿ ರವರು ಬರೆದುಕೊಟ್ಟಿದ್ದಾರೆನ್ನಲಾದ ಒಪ್ಪಿಗೆ ಪತ್ರ ಕಡತದಲ್ಲಿದ್ದು, ಸದರಿ ಒಪ್ಪಿಗೆ ಪತ್ರದಲ್ಲಿ ಸ್ಥಳ ಮತ್ತು ದಿನಾಂಕ ನಮೂದಿಸಲು ಮೀಸಲಿರಿಸಿದ ಜಾಗದಲ್ಲಿ ಸ್ಥಳ ಮತ್ತು

ದಿನಾಂಕ ನಮೂದಿಸದೇ ಇರುವುದು ಹಾಗೂ ಸದರಿ ಒಪ್ಪಿಗೆ ಪತ್ರವನ್ನು ಯಾವ ಅಧಿಕಾರಿಗೆ ನೀಡಿದೆ ಎಂದು ನಮೂದಿಸದೇ ಇರುವುದು ಕಂಡು ಬಂದಿದ್ದು ಆ.ಸ.ನೌ–1 ಮತ್ತು 2 ಆದ ನೀವು ಕೇಂದ್ರ ಪುರಸ್ಕೃತ ರಾಷ್ಟ್ರೀಯ ಸೂಕ್ಷ್ಮ ನೀರಾವರಿ ಮಿಷನ್ ಯೋಜನೆಯಡಿಯಲ್ಲಿ ಇರುವ ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿ ಕರ್ತವ್ಯಲೋಪವೆಸಗಿರುತ್ತೀರಿ

2)ದೂರುದಾರರು ತಮ್ಮ ಬಾಬ್ತು ಕೆರವಡಿ ಗ್ರಾಮದ ಸರ್ವೆ ನಂ.66/2ಸಿ ರಲ್ಲಿ ಹನಿ \ ತುಂತುರು ನೀರಾವರಿ ಪದ್ಧತಿ ಅಳವಡಿಸಲು ಕೋರಿ ಸಲ್ಲಿಸಿದ್ದಾರೆಂದು ಹೇಳಿದ ಅರ್ಜಿ (ಅರ್ಜಿ ಸಂಖ್ಯೆ:269459, ದಿನಾಂಕ:25/03/11)ಯ ಪ್ರತಿಯನ್ನು ದೂರುದಾರರು ಹಾಜರುಪಡಿಸಿದ್ದಾರೆ. ತಾಲ್ಲೂಕ್ ಸಹಾಯಕ ತೋಟಗಾರಿಕೆ ನಿರ್ದೇಶಕರು\ ಸಹಾಯಕ ತೋಟಗಾರಿಕೆ ನಿರ್ದೇಶಕರು, ದೂರುದಾರರ ಅರ್ಜಿ ಮತ್ತು ದಾಖಲೆಗಳನ್ನು ಪರಿಶೀಲಿಸಿ, ಅವರ ಹೆಸರನ್ನು ಜೇಷ್ಠತಾ ವಹಿಯಲ್ಲಿ ನಮೂದಿಸಿದ ಬಗ್ಗೆ ದಾಖಲೆಗಳು ಲಭ್ಯವಿಲ್ಲ. ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ) ರವರು ಅರ್ಜಿ ಮತ್ತು ದಾಖಲೆಗಳನ್ನು ಪರಿಶೀಲಿಸಿ, ತಾಲ್ಲೂಕ್‌ವಾರು ಜೇಷ್ಠತಾ ಪಟ್ಟಿಯನ್ನು ಅನುಮೋದಿಸಿದ ಬಗ್ಗೆ ದಾಖಲೆಗಳು ಲಭ್ಯವಿಲ್ಲ. ಆದರೆ, ಜೇಷ್ಠತಾ ಕ್ರಮ ಸಂಖ್ಯೆಯು ಪೂರ್ವಭಾವಿ ಮಂಜೂರಾತಿ ಪತ್ರದಲ್ಲಿ ನಮೂದಾಗಿರುವುದು ಕಂಡು ಬಂದಿದ್ದು ಆ.ಸ.ನೌ–1 ಮತ್ತು 2 ಆದ ನೀವು ಕೇಂದ್ರ ಪುರಸ್ಕೃತ ರಾಷ್ಟ್ರೀಯ ಸೂಕ್ಷ್ಮ ನೀರಾವರಿ ಮಿಷನ್ ಯೋಜನೆಯಡಿಯಲ್ಲಿ ಇರುವ ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿ ಕರ್ತವ್ಯಲೋಪವೆಸಗಿರುತ್ತೀರಿ

3)ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ) ರವರು ಅನುಮೋದಿತ ಕ್ರಿಯಾ ಯೋಜನೆ ಮಿತಿಯಲ್ಲಿ ಫಲಾನುಭವಿಗೆ ಕಾರ್ಯಾದೇಶ ನೀಡಿರುವ ದಾಖಲೆಯಿಲ್ಲ. ದೂರುದಾರರು ಮತ್ತು ಅವರ ಸಹೋದರನ ಬಾಬ್ತು ಜಮೀನಿನಲ್ಲಿ ಹನಿ \ ತುಂತುರು ನೀರಾವರಿ ಪದ್ಧತಿಯನ್ನು ಯಾವ ದಿನದಂದು ಅಳವಡಿಸಲಾಗಿದೆಯೆಂಬ ಬಗ್ಗೆ ದಾಖಲೆಯಿಲ್ಲ. ದೂರುದಾರರಿಗೆ ಹನಿ ನೀರಾವರಿ ಉಪಕರಣ ನಿರ್ವಹಿಸುವ ಬಗ್ಗೆ ತರಭೇತಿ ನೀಡಿದೆಯೆಂದು ಹೇಳಲಾಗಿದ್ದು, ದೂರುದಾರರಿಗೆ ತರಬೇತಿ ನೀಡಿರುವ ಬಗ್ಗೆ ದಾಖಲೆಗಳಿಲ್ಲ; ಆ.ಸ.ನೌ–1 ಮತ್ತು

29/11

2 ಆದ ನೀವು ಕೇಂದ್ರ ಪುರಸ್ಕೃತ ರಾಷ್ಟ್ರೀಯ ಸೂಕ್ಷ್ಮ ನೀರಾವರಿ ಮಿಷನ್ ಯೋಜನೆಯಡಿಯಲ್ಲಿ ಇರುವ ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿ ಕರ್ತವ್ಯಲೋಪವೆಸಗಿರುತ್ತೀರಿ

4)ದೂರುದಾರರ ಮತ್ತು ಅವರ ಸಹೋದರನ ಬಾಬ್ತು ಜಮೀನಿನಲ್ಲಿ ಕೊಳವೆ ಬಾವಿ ಇದೆಯೆಂದು ದಿ:25/03/11ರ ಅರ್ಜಿಯಲ್ಲಿ ಹೇಳಿದ್ದು, ಜಮೀನಿನಲ್ಲಿ ಕೊಳವೆ ಬಾವಿ ಇದ್ದ ಬಗ್ಗೆ ಭಾವಚಿತ್ರವಿಲ್ಲ. ಶ್ರೀ ವೀರಭದ್ರೇಶ್ವರ ಏಜೆನ್ಸಿಸ್ ರವರು ದೂರುದಾರರ ಮತ್ತು ಅವರ ಸಹೋದರನ ಬಾಬ್ತು ಜಮೀನಿನಲ್ಲಿ ತುಂತುರು \ ಹನಿ ನೀರಾವರಿ ಪರಿಕರಗಳನ್ನು ಅಳವಡಿಸಿದ ಬಾಬ್ತು, ಕಾಮಗಾರಿ ಮುಕ್ತಾಯದ ವರದಿ ಮತ್ತು ಉಪಕರಣಗಳ ಗ್ಯಾರಂಟಿ ಪತ್ರಗಳಲ್ಲಿ ದಿನಾಂಕಗಳು ನಮೂದಾಗಿಲ್ಲ; ಆ.ಸ.ನೌ–1 ಮತ್ತು 2 ಆದ ನೀವು ಕೇಂದ್ರ ಪುರಸ್ಕೃತ ರಾಷ್ಟ್ರೀಯ ಸೂಕ್ಷ್ಮ ನೀರಾವರಿ ಮಿಷನ್ ಯೋಜನೆಯಡಿಯಲ್ಲಿ ಇರುವ ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿ ಕರ್ತವ್ಯಲೋಪವೆಸಗಿರುತ್ತೀರಿ

5)ದೂರುದಾರರ ಮತ್ತು ಅವರ ಸಹೋದರನ ಬಾಬ್ತು ಜಮೀನಿನಲ್ಲಿ ಅಳವಡಿಸಲಾಗಿದೆಯೆಂದು ಹೇಳಿದ ಹನಿ ನೀರಾವರಿ ಉಪಕರಣ ಮತ್ತು ಇತರೆ ಸಾಧನಗಳ ಕೊಟೇಷನ್ ದಿನಾಂಕ:25/03/11ರಲ್ಲಿ '45,588/– ಆಗಿದ್ದು, ಅವರಿಗೆ ಸಹಾಯ ಧನದ ಮೊತ್ತ ಒಟ್ಟು '32,500/– ಮಂಜೂರಾಗಿ ಬಿಲ್ ಮಾಡಿದೆಯೆಂದು ಕೊಟೇಷನ್ ಮೇಲೆ ಮತ್ತು ಸಾದಿಲ್ವಾರು ಬಿಲ್ಲುಗಳಲ್ಲಿ ಆ.ಸ.ನೌ–1 ಸಹಿ ಮಾಡಿದ್ದೀರಿ. ಆದರೆ, ದೂರುದಾರರ ಬಾಬ್ತು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಡಗಿ ಶಾಖೆಯ ಖಾತೆ ಸಂಖ್ಯೆ:600302010002905ಗೆ ದಿನಾಂಕ:30/11/11ರಂದು '31,800/– ಮಾತ್ರ ಜಮಾ ಆಗಿ, ಅದೇ ದಿನ ಸದರಿ ಮೊತ್ತವನ್ನು ಸೆಲ್ಫ್ ಚೆಕ್ ಮುಖೇನ ಬ್ಯಾಂಕ್‌ನಿಂದ ಪಡೆದಿರುವುದು ಕಂಡು ಬಂದಿದೆ. ಮಂಜೂರಾದ ಮೊತ್ತದ ಪೈಕಿ '700/– ಕೊರತೆಯಾದ ಬಗ್ಗೆ ಕಾರಣವೇನೆಂದು ಸಹ ಹೇಳಿಲ್ಲ; ಆ.ಸ.ನೌ–1 ಮತ್ತು 2 ಆದ ನೀವು ಕೇಂದ್ರ ಪುರಸ್ಕೃತ ರಾಷ್ಟ್ರೀಯ ಸೂಕ್ಷ್ಮ ನೀರಾವರಿ ಮಿಷನ್ ಯೋಜನೆಯಡಿಯಲ್ಲಿ ಇರುವ ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿ ಕರ್ತವ್ಯಲೋಪವೆಸಗಿರುತ್ತೀರಿ

6)ದೂರುದಾರರ ಮತ್ತು ಅವರ ಸಹೋದರನ ಬಾಬ್ತು ಜಮೀನಿನಲ್ಲಿ ಹನಿ ನೀರಾವರಿ ಪದ್ಧತಿ ಅಳವಡಿಸಲಾಗಿದೆಯೆಂಬ ಸಮಯಕ್ಕೆ ಮತ್ತು ಚೆಕ್ ಮುಖೇನ ಸಹಾಯ ಧನ ದೂರುದಾರರ ಬ್ಯಾಂಕ್ ಖಾತೆಗೆ ಜಮಾ ಆದ ಸಮಯಕ್ಕೆ 1ನೇ ಆರೋಪಿತ ಸರ್ಕಾರಿ ನೌಕರರು ಆದ ನೀವು ಬ್ಯಾಡಗಿ ತಾಲ್ಲೂಕ್ ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರು (ಜಿ.ಪಂ) ಆಗಿ ಕರ್ತವ್ಯ ನಿರ್ವಹಿಸುತ್ತಿದ್ದು, 2ನೇ ಆರೋಪಿತ ಸರ್ಕಾರಿ ನೌಕರರು ಆದ ನೀವು ಸಹಾಯಕ ತೋಟಗಾರಿಕಾ ಅಧಿಕಾರಿ, ರೈತ ಸಂಪರ್ಕ ಕೇಂದ್ರ, ಬ್ಯಾಡಗಿಯಲ್ಲಿ ಕರ್ತವ್ಯ ನಿರ್ವಹಿಸಿದ್ದು, 2ನೇ ಆರೋಪಿತ ಸರ್ಕಾರಿ ನೌಕರರು ಆದ ನೀವು ಸ್ಥಳ ಪರಿಶೀಲನೆ ಮಾಡಿದ ಬಗ್ಗೆ ಸ್ಥಳ ಪರಿಶೀಲನಾ ವರದಿ ಮತ್ತು ಇತರೆ ದಾಖಲೆಗಳನ್ನು ದೃಢೀಕರಿಸಿ, ಸಹಿ ಮಾಡದೇ ಆ.ಸ.ನೌ–1 ಮತ್ತು 2 ಆದ ನೀವು ಕೇಂದ್ರ ಪುರಸ್ಕೃತ ರಾಷ್ಟ್ರೀಯ ಸೂಕ್ಷ್ಮ ನೀರಾವರಿ ಮಿಷನ್ ಯೋಜನೆಯಡಿಯಲ್ಲಿ ಇರುವ ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿ ಕರ್ತವ್ಯಲೋಪವೆಸಗಿರುತ್ತೀರಿ

ಆದ್ದರಿಂದ, ಆ.ಸ.ನೌಕರರಾದ 1 ಮತ್ತು 2 ಆದ ನೀವು ಕರ್ತವ್ಯಲೋಪವೆಸಗಿ ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (i) ರಿಂದ (iii) ರಡಿಯಲ್ಲಿ ದುರ್ನಡತೆಯನ್ನೆಸಗಿದ್ದೀರಿ.

## ANNEXURE-2

## STATEMENT OF IMPUTATIONS OF MISCONDUCT

ಹಾವೇರಿ ಜಿಲ್ಲೆ ಬ್ಯಾಡಗಿ ತಾಲ್ಲೂಕ್ ಕೆರವಡಿ ಗ್ರಾಮ ಮತ್ತು ಅಂಚೆಯ ನಿವಾಸಿಯಾದ ಶ್ರೀ.ಕಲ್ಲಯ್ಯ ಗೂಳಯ್ಯ ಸಾಲಿ (ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಹಾವೇರಿ ಜಿಲ್ಲೆ ಬ್ಯಾಡಗಿ ತಾಲ್ಲೂಕ್ 1) ಸಹಾಯಕ ತೋಟಗಾರಿಕೆ ಅಧಿಕಾರಿ ಮತ್ತು ಪ್ರಭಾರ ಹಿರಿಯ ತೋಟಗಾರಿಕೆ ಅಧಿಕಾರಿಯಾದ ಶ್ರೀ.ರಂಗಪ್ಪ, 2) ಹಿರಿಯ ತೋಟಗಾರಿಕೆ ಅಧಿಕಾರಿಯಾಗಿದ್ದ ಶ್ರೀ.ಚಿದಾನಂದಪ್ಪ.ಪಿ.ಜಿ [ಪ್ರಸ್ತುತ ತೋಟಗಾರಿಕೆ ಉಪ

4-29/11

ನಿರ್ದೇಶಕರು, ಬಳ್ಳಾರಿ], 3) ಸಹಾಯಕ ತೋಟಗಾರಿಕೆ ಅಧಿಕಾರಿಯಾಗಿದ್ದ ಶ್ರೀ.ಎಸ್.ಬಿ.ಪಾಟೀಲ್ [ಪ್ರಸ್ತುತ ನಿವೃತ್ತ] ಮತ್ತು 4) ಕೆರವಡಿ ಗ್ರಾಮ ಲೆಕ್ಕಿಗರಾದ ಶ್ರೀ.ಹೆಚ್.ಬಿ.ಹಿತ್ತಲಮನಿ (ಇನ್ನು ಮುಂದೆ, '1 ರಿಂದ 4ನೇ ಎದುರುದಾರರು' ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ) ರವರ ವಿರುದ್ಧದ ದುರ್ನಡತೆ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

ದೂರಿನ ಸಂಕ್ಷಿಪ್ತ ವಿವರಣೆ:- ದೂರುದಾರರ ಬಾಬ್ತು ಬ್ಯಾಡಗಿ ತಾಲ್ಲೂಕ್ ಕೆರವಡಿ ಗ್ರಾಮದ ರಿ.ಸರ್ವೆ ನಂ.66/2ಸಿ ಜಮೀನಿನಲ್ಲಿ ನೀರಾವರಿ ಮೂಲವಿರದಿದ್ದರೂ, 2011-12ನೇ ಸಾಲಿನಲ್ಲಿ ಹನಿ ನೀರಾವರಿ ಸಹಾಯ ಧನ ಕೋರಿ ಯಾವುದೇ ಅರ್ಜಿಯನ್ನು ಸಲ್ಲಿಸದೇ ಇದ್ದರೂ, ಹನಿ ನೀರಾವರಿ ಸೌಲಭ್ಯ ಅಳವಡಿಸಿಕೊಂಡಿರುವುದಾಗಿ ತಮ್ಮ ಹೆಸರಿನಲ್ಲಿ ಸುಳ್ಳು ಅರ್ಜಿಯನ್ನು ಸೃಷ್ಟಿಸಿಕೊಂಡು, ಸಲಕರಣೆಗಳನ್ನು ಒದಗಿಸುವ ಏಜೆನ್ಸಿಗಳಿಂದ ಖೊಟ್ಟಿ ಕಾಗದ ಪತ್ರಗಳನ್ನು ಮತ್ತು ಗ್ರಾಮ ಲೆಕ್ಕಾಧಿಕಾರಿಯಿಂದ, ಬೆಳೆ ಪ್ರಮಾಣ ಪತ್ರ, ನಕ್ಷೆ, ನೀರಾವರಿ ಸೌಲಭ್ಯವಿರುವ ಪ್ರಮಾಣ ಪತ್ರ, ಸ್ಥಳ ಪರಿಶೀಲನಾ ವರದಿ, ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆ ಇರುವಂತೆ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ, ಹಣವನ್ನು ಡ್ರಾ ಮಾಡಿಕೊಂಡಿದ್ದಾರೆಂದು ಹೇಳಿದ್ದಾರೆ.

ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ -

ತಮ್ಮನ್ನು ದಿನಾಂಕ:11/08/10ರಂದು ಬ್ಯಾಡಗಿ ಕಛೇರಿ ಸಹಾಯಕ ತೋಟಗಾರಿಕೆ ಅಧಿಕಾರಿ ಹುದ್ದೆಯಿಂದ ಬಿಡುಗಡೆಗೊಂಡಿದ್ದು, ದೂರುದಾರರ ಆಪಾದನೆ ಸಮಯಕ್ಕೆ 2ನೇ ಎದುರುದಾರರು ಅಂದರೆ 1ನೇ ಆರೋಪಿತ ಸರ್ಕಾರಿ ನೌಕರರು ಸದರಿ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. 3ನೇ ಎದುರುದಾರರು ಅಂದರೆ 2ನೇ ಆರೋಪಿತ ಸರ್ಕಾರಿ ನೌಕರರು ಆ ಸಮಯದಲ್ಲಿ ರೈತ ಸಂಪರ್ಕ ಕೇಂದ್ರ, ಕಾಗಿನೆಲೆಯಲ್ಲಿ ಸಹಾಯಕ ತೋಟಗಾರಿಕೆ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಸದರಿಯವರುಗಳಿಬ್ಬರು ಪರಿಶೀಲನೆ

ಮಾಡಿ ದೂರುದಾರರ ಬಾಬ್ತು ಸಹಾಯ ಧನವನ್ನು ಅವರು ಯೂನಿಯನ್ ಬ್ಯಾಂಕ್‌ನಲ್ಲಿ ಹೊಂದಿರುವ ಖಾತೆಗೆ ಜಮಾ ಮಾಡಿದ್ದಾರೆಂದು ಹೇಳಿದ್ದಾರೆ.

ಎರಡನೇ (2ನೇ) ಎದುರುದಾರರು ಅಂದರೆ 1ನೇ ಆರೋಪಿತ ಸರ್ಕಾರಿ ನೌಕರರು ತಮ್ಮ ಆಕ್ಷೇಪಣೆಯಲ್ಲಿ 

ದೂರುದಾರರ ಬಾಬ್ತು '31,800/– ಸಹಾಯ ಧನವನ್ನು ದಿನಾಂಕ:30/11/11ರಂದು ಸದರಿಯವರ ಬ್ಯಾಂಕ್ ಖಾತೆಗೆ ಜಮಾ ಮಾಡಿದ್ದು, ಸದರಿ ಹಣವನ್ನು ಅವರು ಅದೇ ದಿನ ಸೆಲ್ಫ್ ಚೆಕ್ ಮುಖೇನ ಬ್ಯಾಂಕ್‌ನಿಂದ ಪಡೆದಿದ್ದಾರೆ. ದೂರುದಾರರು ಉದ್ದೇಶಪೂರ್ವಕವಾಗಿ ತಮ್ಮ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಡಗಿ ಶಾಖೆಯ ಖಾತೆ ಉತಾರವನ್ನು ಹಾಜರುಪಡಿಸಿಲ್ಲ. ಸದರಿ ದೂರನ್ನು ವಿಳಂಭವಾಗಿ ಸಲ್ಲಿಸಲಾಗಿದ್ದು, ಸದರಿ ವಿಳಂಭಕ್ಕೆ ದೂರುದಾರರು ಯಾವುದೇ ಕಾರಣವನ್ನು ನೀಡಿಲ್ಲ. ದೂರುದಾರರು ಪ್ರಮುಖ ಅಂಶಗಳನ್ನು ಮುಚ್ಚಿಟ್ಟು ದೂರು ಸಲ್ಲಿಸಿರುವುದರಿಂದ ಮತ್ತು ದೂರು ಸಲ್ಲಿಸುವಲ್ಲಿ ಕಾಲ ವಿಳಂಬವಾಗಿದೆಯೆಂದು ಹೇಳಿದ್ದಾರೆ.

ಮೂರನೇ (3ನೇ) ಎದುರುದಾರರು ಅಂದರೆ 2ನೇ ಆರೋಪಿತ ಸರ್ಕಾರಿ ನೌಕರರು ತಮ್ಮ ಆಕ್ಷೇಪಣೆಯಲ್ಲಿ –

2011–12ನೇ ಸಾಲಿನಲ್ಲಿ ತಾವು ಬ್ಯಾಡಗಿ ತಾಲ್ಲೂಕ್ ರೈತ ಸಂಪರ್ಕ ಕೇಂದ್ರದಲ್ಲಿ ಸಹಾಯಕ ತೋಟಗಾರಿಕೆ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದು, ವಿಳಂಭವಾಗಿ ದೂರು ಸಲ್ಲಿಸಿದ ಬಗ್ಗೆ ದೂರುದಾರರು ಯಾವುದೇ ಕಾರಣವನ್ನು ನೀಡಿಲ್ಲ. ದೂರುದಾರರ ಬಾಬ್ತು ಸಹಾಯ ಧನ ಮಂಜೂರಾಗಿದ್ದರೂ, ತಮ್ಮ ಬ್ಯಾಂಕ್ ಖಾತೆಯ ತಃಖ್ತೆಯನ್ನು ಸದರಿಯವರು ಉದ್ದೇಶಪೂರ್ವಕವಾಗಿ ಹಾಜರುಪಡಿಸಿಲ್ಲವೆಂದು ಹೇಳಿದ್ದಾರೆ.

ನಾಲ್ಕನೇ (4ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ರಿ.ಸರ್ವೆ ನಂ.124/1, 124/2 ಮತ್ತು ಸರ್ವೆ ನಂ.66/2ಕ ಜಮೀನುಗಳು ದೂರುದಾರರು ಮತ್ತು ಅವರ ಸಹೋದರ ಶ್ರೀ.ಶೇಖರಯ್ಯ

ಗೂಳಯ್ಯ ಸಾಲಿ ರವರಿಗೆ ಸಂಬಂಧಿಸಿದ್ದಾಗಿದ್ದು, ಸದರಿಯವರು ಮೂರು ಜಮೀನುಗಳಿಗೆ ಸಂಬಂಧಿಸಿದ ಕಂದಾಯ ದಾಖಲೆಗಳಾದ ಖಾತೆ ಉತಾರ, ಪ್ರಮಾಣ ಪತ್ರ, ಅಂದಾಜು ಹಾಥ್ ನಕ್ಷೆಗಳನ್ನು ಖುದ್ದಾಗಿ ಪಡೆದುಕೊಂಡಿದ್ದಾರೆಂದು ಹೇಳಿದ್ದಾರೆ.

ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ–

1. ಕೇಂದ್ರ ಪುರಸ್ಕೃತ ರಾಷ್ಟ್ರೀಯ ಸೂಕ್ಷ್ಮ ನೀರಾವರಿ ಮಿಷನ್ ಯೋಜನೆಯಡಿಯಲ್ಲಿ ಎಲ್ಲಾ ವರ್ಗದ ರೈತರಿಗೆ ಮೊದಲು 2 ಹೆಕ್ಟೇರ್ ಪ್ರದೇಶದವರೆಗೆ ಶೇ.90ರಂತೆ ಹಾಗೂ ಉಳಿದ 3 ಹೆಕ್ಟೇರ್ ಪ್ರದೇಶಕ್ಕೆ ಶೇ.50ರಂತೆ ಹನಿ \ ತುಂತುರು ನೀರಾವರಿ ಪದ್ಧತಿ ಅಳವಡಿಕೆಗೆ ಸಹಾಯ ಧನವನ್ನು ನೀಡಲಾಗುತ್ತದೆ;

2. ಸದರಿ ಯೋಜನೆಯ ಪ್ರಯೋಜನ ಪಡೆಯಲಿಚ್ಛಿಸುವ ಫಲಾನುಭವಿಗಳ ಅರ್ಹತೆ ಈ ಕೆಳಗಿನಂತಿದೆ –

1) ಫಲಾನುಭವಿಗಳು ರೈತರಾಗಿದ್ದು, ಜಮೀನು ಅವರ ಹೆಸರಿನಲ್ಲಿರಬೇಕು;

2) ಜಂಟಿ ಖಾತೆಯಾಗಿದ್ದಲ್ಲಿ, ಇತರೆ ಖಾತೆದಾರರ ಒಪ್ಪಿಗೆ ಪತ್ರ ಪಡೆದಿರಬೇಕು;

3) ಮಹಿಳೆ ಹೆಸರಿನಲ್ಲಿ ಖಾತೆಯಿದ್ದು, ಕುಟುಂಬದ ಇತರ ಪುರುಷ ಸದಸ್ಯರ ಹೆಸರಿನಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ, ಯಾವುದೇ ಕಾರಣಕ್ಕೂ ಮಾನ್ಯ ಮಾಡಬಾರದು;

4) ಫಲಾನುಭವಿಗಳು ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ರೈತರಾಗಿರಬೇಕು ಅಥವಾ ತೋಟಗಾರಿಕೆ ಬೆಳೆ ಬೆಳೆಯುವ ಆಸಕ್ತಿ ಹೊಂದಿರಬೇಕು;

3)ಆಸಕ್ತಿಯುಳ್ಳ ರೈತರು ಈ ಕೆಳಕಂಡ ದಾಖಲಾತಿಗಳೊಂದಿಗೆ ತಾಲ್ಲೂಕ್ ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರು \ಸಹಾಯಕ ತೋಟಗಾರಿಕಾ ನಿರ್ದೇಶಕರ ಕಛೇರಿಗೆ ಸಲ್ಲಿಸಬೇಕು –

1. ನಿಗದಿತ ನಮೂನೆಯಲ್ಲಿ ಫಲಾನುಭವಿಯ ಭಾವಚಿತ್ರ ಮತ್ತು ಫಲಾನುಭವಿ ಭರ್ತಿ ಮಾಡಿ, ಸಹಿ ಮಾಡಿದ ಅರ್ಜಿ (ದ್ವಿಪ್ರತಿಯಲ್ಲಿ);

2. ಪಹಣಿ;

3. ಅನುಮೋದಿತ ಕಂಪನಿ \ ಡೀಲರ್ ರವರು ನೀಡಿದ ಅಂದಾಜು ಪಟ್ಟಿ ಅಥವಾ ದರ ಪಟ್ಟಿ;

4. ಹನಿ \ ತುಂತುರು ನೀರಾವರಿ ಅಳವಡಿಸುವ ಜಮೀನಿನ ಚಕ್ಕುಬಂದಿ;

4)ತಾಲ್ಲೂಕ್ ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರು \ಸಹಾಯಕ ತೋಟಗಾರಿಕಾ ನಿರ್ದೇಶಕರು ಅರ್ಜಿ ಹಾಗೂ ದಾಖಲೆಗಳನ್ನು ಪರಿಶೀಲಿಸಿ, ಅರ್ಹ ಅರ್ಜಿದಾರರ ಹೆಸರುಗಳನ್ನು ಜೇಷ್ಠತಾ ವಹಿಯಲ್ಲಿ ನಮೂದಿಸಿ, 5 ದಿನಗಳೊಳಗಾಗಿ ಸಹಾಯ ಧನ ಅರ್ಜಿಯನ್ನು ಕಛೇರಿಗೆ ತೋಟಗಾರಿಕಾ ಉಪ ನಿರ್ದೇಶಕರು (ಜಿಲ್ಲಾ ಪಂಚಾಯತ್) ರವರಿಗೆ ಎಲ್ಲಾ ದಾಖಲೆಗಳ ಸಹಿತ ಕಳುಹಿಸಬೇಕು. ಸದರಿಯವರ ಅರ್ಜಿ ಮತ್ತು ದಾಖಲಾತಿಗಳನ್ನು ಪರಿಶೀಲಿಸಿ, ಜೇಷ್ಠತಾ ಪಟ್ಟಿಯನ್ನು ಅನುಮೋದಿಸಿದ ನಂತರ ಅನುಮೋದಿತ ಕ್ರಿಯಾ ಯೋಜನೆಯ ಮಿತಿಯಲ್ಲಿ ಫಲಾನುಭವಿಗಳಿಗೆ ಕಾರ್ಯಾದೇಶವನ್ನು 5 ದಿನಗಳೊಳಗಾಗಿ ನೀಡಬೇಕು. ಅವರಿಂದ ಕಾರ್ಯಾದೇಶ ಪಡೆದ ನಂತರ ರೈತರು \ ಕಂಪನಿಯವರು 30 ದಿನಗಳೊಳಗಾಗಿ ಅರ್ಜಿದಾರರ ತಾಕಿನಲ್ಲಿ ಹನಿ \ ತುಂತುರು ನೀರಾವರಿ ಪದ್ಧತಿ ಅಳವಡಿಸುವುದು, ನಂತರ ಈ ಕೆಳಕಂಡ ದಾಖಲೆಗಳಾದ,

1) ರೈತರ ಸಹಿ ಪಡೆದಿರುವ ಕಂಪನಿ ನೀಡುವ ಡೆಲಿವರಿ ಚಲನ್;
2) ಕಂಪನಿ ಮೇಲು ಸಹಿ ಇರುವ ಇನ್‌ವಾಯ್ಸ್ \ ಟ್ಯಾಕ್ಸ್ ಇನ್‌ವಾಯ್ಸ್ \ ಕ್ರೆಡಿಟ್ ಬಿಲ್\ ಕ್ಯಾಷ್ ಬಿಲ್ (ವ್ಯಾಟ್ ಸಂಖ್ಯೆ ಮತ್ತು ಮಾರಾಟ ತೆರಿಗೆ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಬೇಕು) ಹಾಗೂ ಈ ದಾಖಲೆಗಳನ್ನು ಕಂಪನಿಯು ಅಪ್‌ಲೋಡ್ ಮಾಡಬೇಕು;
3) ರೈತರು ಸರಬರಾಜುದಾರರಿಗೆ ಎಷ್ಟು ಹಣ ಸಂದಾಯ ಮಾಡಿರುತ್ತಾರೋ ಅಷ್ಟಕ್ಕೆ ರಸೀದಿ, ಮಣ್ಣು \ ನೀರಿನ ಪರೀಕ್ಷಾ ವರದಿ;
4) ಕೆಲಸ ಪೂರ್ಣಗೊಂಡಿರುವ ವರದಿ (ಕಂಪನಿ ಹಾಗೂ ಫಲಾನುಭವಿಗಳ ದೃಢೀಕರಣ ಕಡ್ಡಾಯವಾಗಿರಬೇಕು);
5) ಫಲಾನುಭವಿಗೆ ಹನಿ ನೀರಾವರಿ ಉಪಕರಣ ನಿರ್ವಹಿಸುವ ಬಗ್ಗೆ ತರಬೇತಿ ನೀಡಿರುವ ವರದಿ;
6) ಹನಿ \ ತುಂತುರು ನೀರಾವರಿ ಪದ್ಧತಿ ಅಳವಡಿಸಿರುವ ಕ್ಷೇತ್ರ ನಕ್ಷೆ;
7) ಕಂಪನಿ ನೀಡುವ ಗ್ಯಾರಂಟಿ ಪತ್ರ (3 ವರ್ಷ ಗ್ಯಾರಂಟಿ ದೃಢೀಕರಣ ಪತ್ರ);
8) ಬ್ಯಾಂಕ್ ಲೋನ್ ಪಡೆದಿದ್ದಲ್ಲಿ ಅವುಗಳ ವಿವರ;
9) ಫಲಾನುಭವಿ ಮತ್ತು ಬೆಳೆ ಸಮೇತ ಸೂಕ್ಷ್ಮ ನೀರಾವರಿ ಉಪಕರಣ ಅಳವಡಿಸಿದ ಛಾಯಾಚಿತ್ರದ ಲಗತ್ತು;
10) ರೈತರು ಶೇ.10ರಷ್ಟು ಪಾಲನ್ನು ಕಂಪನಿಗೆ ಪಾವತಿಸಿ, ಶೇ.90 ಸಹಾಯಧನವನ್ನು ಕಂಪನಿಗೆ ನೇರವಾಗಿ ನೀಡಲು ಇಚ್ಛೆಸಿದ್ದಲ್ಲಿ ಮಾತ್ರ ನಿರಾಕ್ಷೇಪಣಾ ಪತ್ರ ಸಲ್ಲಿಸುವುದು.

ಕಂಪನಿಯವರು ಅಪ್‌ಲೋಡ್ ಮಾಡಿದ ನಂತರ ಸಂಬಂಧಿಸಿದ ಸಹಾಯಕ ತೋಟಗಾರಿಕೆ ಅಧಿಕಾರಿಯವರು ಫಲಾನುಭವಿಯೊಂದಿಗೆ ತಾಕುಗಳನ್ನು ಪರಿಶೀಲಿಸಿ, ಹನಿ \ ತುಂತುರು ನೀರಾವರಿ ಪದ್ಧತಿಯ ಅನುಷ್ಠಾನದ ಗುಣಮಟ್ಟ ಹಾಗೂ ಹನಿ ನೀರಾವರಿ ಅಳವಡಿಸಿರುವ ಪ್ರಮಾಣ ಕುರಿತಂತೆ ತೃಪ್ತಿಕರವಾಗಿದ್ದಲ್ಲಿ, ಅನುಷ್ಠಾನದ ವಿವರ ಹಾಗೂ ತಾನು ಹಾಗೂ ಫಲಾನುಭವಿಗಳ ಸಮೇತ ಹನಿ ನೀರಾವರಿ \ ತುಂತುರು ನೀರಾವರಿ ಪದ್ಧತಿಯ ಫೋಟೋ ತೆಗೆದು ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರಿಗೆ ಆನ್‌ಲೈನ್‌ನಲ್ಲಿ 5 ದಿನಗಳೊಳಗಾಗಿ ಸಲ್ಲಿಸಬೇಕು. ಕಾರ್ಯಾದೇಶ ಪಡೆದ 30 ದಿನಗಳೊಳಗೆ ಹನಿ \ ತುಂತುರು ನೀರಾವರಿ ಪದ್ಧತಿ ಅಳವಡಿಸದಿದ್ದಲ್ಲಿ, ಕಾರ್ಯಾದೇಶ ತಾನಾಗೇ ರದ್ದಾಗುತ್ತದೆ;

5)ಸದರಿ ದೂರಿನಲ್ಲಿ ದೂರುದಾರರು ಮತ್ತು ಅವರ ಸಹೋದರ ಎಂದು ಹೇಳಲಾದ ಶ್ರೀ.ಶೇಖರಯ್ಯ ಸಾಲಿ ಹೆಸರಿನಲ್ಲಿ ಬ್ಯಾಡಗಿ ತಾಲ್ಲೂಕ್ ಕಾಗಿನೆಲೆ ಹೋಬಳಿ ಕೆರವಡಿ ಗ್ರಾಮದ ಸರ್ವೆ ನಂ.66/2ಸಿ (66/2ಕ) ರಲ್ಲಿ 3 ಎಕರೆ 15 ಗುಂಟೆ ಜಮೀನಿರುವುದು 2010–11ನೇ ಸಾಲಿನ ಪಹಣಿ ಮತ್ತು ಖಾತೆ ಉತಾರದಲ್ಲಿ ಕಂಡು ಬಂದಿದೆ. ಸಹಾಯ ಧನದ ಮೊತ್ತವನ್ನು \ ಚೆಕ್ ಅನ್ನು ದೂರುದಾರರ ಹೆಸರಿನಲ್ಲಿ ನೀಡಲು ಒಪ್ಪಿಗೆ ಇದೆಯೆಂದು ಶ್ರೀ.ಶೇಖರಯ್ಯ ಸಾಲಿ ರವರು ಬರೆದುಕೊಟ್ಟಿದ್ದಾರೆನ್ನಲಾದ ಒಪ್ಪಿಗೆ ಪತ್ರ ಕಡತದಲ್ಲಿದ್ದು, ಸದರಿ ಒಪ್ಪಿಗೆ ಪತ್ರದಲ್ಲಿ ಸ್ಥಳ ಮತ್ತು ದಿನಾಂಕ ನಮೂದಿಸಲು ಮೀಸಲಿರಿಸಿದ ಜಾಗದಲ್ಲಿ ಸ್ಥಳ ಮತ್ತು ದಿನಾಂಕ ನಮೂದಿಸದೇ ಇರುವುದು ಹಾಗೂ ಸದರಿ ಒಪ್ಪಿಗೆ ಪತ್ರವನ್ನು ಯಾವ ಅಧಿಕಾರಿಗೆ ನೀಡಿದೆ ಎಂದು ನಮೂದಿಸದೇ ಇರುವುದು ಕಂಡು ಬಂದಿದೆ;

6)ದೂರುದಾರರು ತಮ್ಮ ಬಾಬ್ತು ಕೆರವಡಿ ಗ್ರಾಮದ ಸರ್ವೆ ನಂ.66/2ಸಿ ರಲ್ಲಿ ಹನಿ \ ತುಂತುರು ನೀರಾವರಿ ಪದ್ಧತಿ ಅಳವಡಿಸಲು ಕೋರಿ ಸಲ್ಲಿಸಿದ್ದಾರೆಂದು ಹೇಳಿದ ಅರ್ಜಿ (ಅರ್ಜಿ ಸಂಖ್ಯೆ:269459, ದಿನಾಂಕ:25/03/11) ಯ ಪ್ರತಿಯನ್ನು ದೂರುದಾರರು ಹಾಜರುಪಡಿಸಿದ್ದಾರೆ. ತಾಲ್ಲೂಕ್ ಸಹಾಯಕ ತೋಟಗಾರಿಕೆ ನಿರ್ದೇಶಕರು\ ಸಹಾಯಕ ತೋಟಗಾರಿಕೆ ನಿರ್ದೇಶಕರು, ದೂರುದಾರರ ಅರ್ಜಿ ಮತ್ತು ದಾಖಲೆಗಳನ್ನು ಪರಿಶೀಲಿಸಿ, ಅವರ ಹೆಸರನ್ನು ಜೇಷ್ಠತಾ ವಹಿಯಲ್ಲಿ ನಮೂದಿಸಿದ ಬಗ್ಗೆ ದಾಖಲೆಗಳು ಲಭ್ಯವಿಲ್ಲ. ಜಿಲ್ಲೆಯ

ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ) ರವರು ಅರ್ಜಿ ಮತ್ತು ದಾಖಲೆಗಳನ್ನು ಪರಿಶೀಲಿಸಿ, ತಾಲ್ಲೂಕ್‌ವಾರು ಜೇಷ್ಠತಾ ಪಟ್ಟಿಯನ್ನು ಅನುಮೋದಿಸಿದ ಬಗ್ಗೆ ದಾಖಲೆಗಳು ಲಭ್ಯವಿಲ್ಲ. ಆದರೆ, ಜೇಷ್ಠತಾ ಕ್ರಮ ಸಂಖ್ಯೆಯು ಪೂರ್ವಭಾವಿ ಮಂಜೂರಾತಿ ಪತ್ರದಲ್ಲಿ ನಮೂದಾಗಿರುವುದು ಕಂಡು ಬಂದಿದೆ;

7)ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ) ರವರು ಅನುಮೋದಿತ ಕ್ರಿಯಾ ಯೋಜನೆ ಮಿತಿಯಲ್ಲಿ ಫಲಾನುಭವಿಗೆ ಕಾರ್ಯಾದೇಶ ನೀಡಿರುವ ದಾಖಲೆಯಿಲ್ಲ. ದೂರುದಾರರು ಮತ್ತು ಅವರ ಸಹೋದರನ ಬಾಬ್ತು ಜಮೀನಿನಲ್ಲಿ ಹನಿ \ ತುಂತುರು ನೀರಾವರಿ ಪದ್ಧತಿಯನ್ನು ಯಾವ ದಿನದಂದು ಅಳವಡಿಸಲಾಗಿದೆಯೆಂಬ ಬಗ್ಗೆ ದಾಖಲೆಯಿಲ್ಲ. ದೂರುದಾರರಿಗೆ ಹನಿ ನೀರಾವರಿ ಉಪಕರಣ ನಿರ್ವಹಿಸುವ ಬಗ್ಗೆ ತರಭೇತಿ ನೀಡಿದೆಯೆಂದು ಹೇಳಲಾಗಿದ್ದು, ದೂರುದಾರರಿಗೆ ತರಭೇತಿ ನೀಡಿರುವ ಬಗ್ಗೆ ದಾಖಲೆಗಳಿಲ್ಲ;

8)ದೂರುದಾರರ ಮತ್ತು ಅವರ ಸಹೋದರನ ಬಾಬ್ತು ಜಮೀನಿನಲ್ಲಿ ಕೊಳವೆ ಬಾವಿ ಇದೆಯೆಂದು ದಿ:25/03/11ರ ಅರ್ಜಿಯಲ್ಲಿ ಹೇಳಿದ್ದು, ಜಮೀನಿನಲ್ಲಿ ಕೊಳವೆ ಬಾವಿ ಇದ್ದ ಬಗ್ಗೆ ಭಾವಚಿತ್ರವಿಲ್ಲ. ಶ್ರೀ ವೀರಭದ್ರೇಶ್ವರ ಏಜೆನ್ಸಿಸ್ ರವರು ದೂರುದಾರರ ಮತ್ತು ಅವರ ಸಹೋದರನ ಬಾಬ್ತು ಜಮೀನಿನಲ್ಲಿ ತುಂತುರು \ ಹನಿ ನೀರಾವರಿ ಪರಿಕರಗಳನ್ನು ಅಳವಡಿಸಿದ ಬಾಬ್ತು, ಕಾಮಗಾರಿ ಮುಕ್ತಾಯದ ವರದಿ ಮತ್ತು ಉಪಕರಣಗಳ ಗ್ಯಾರಂಟಿ ಪತ್ರಗಳಲ್ಲಿ ದಿನಾಂಕಗಳು ನಮೂದಾಗಿಲ್ಲ;

9)ದೂರುದಾರರ ಮತ್ತು ಅವರ ಸಹೋದರನ ಬಾಬ್ತು ಜಮೀನಿನಲ್ಲಿ ಅಳವಡಿಸಲಾಗಿದೆಯೆಂದು ಹೇಳಿದ ಹನಿ ನೀರಾವರಿ ಉಪಕರಣ ಮತ್ತು ಇತರೆ ಸಾಧನಗಳ ಕೊಟೇಷನ್ ದಿನಾಂಕ:25/03/11ರಲ್ಲಿ '45,588/– ಆಗಿದ್ದು, ಅವರಿಗೆ ಸಹಾಯ ಧನದ ಮೊತ್ತ ಒಟ್ಟು '32,500/– ಮಂಜೂರಾಗಿ ಬಿಲ್ ಮಾಡಿದೆಯೆಂದು ಕೊಟೇಷನ್ ಮೇಲೆ ಮತ್ತು ಸಾದಿಲ್ವಾರು ಬಿಲ್ಲುಗಳಲ್ಲಿ 2ನೇ ಎದುರುದಾರರು ಸಹಿ ಮಾಡಿದ್ದಾರೆ. ಆದರೆ, ದೂರುದಾರರ ಬಾಬ್ತು

ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಡಗಿ ಶಾಖೆಯ ಖಾತೆ ಸಂಖ್ಯೆ:600302010002905ಗೆ ದಿನಾಂಕ:30/11/11ರಂದು '31,800/- ಮಾತ್ರ ಜಮಾ ಆಗಿ, ಅದೇ ದಿನ ಸದರಿ ಮೊತ್ತವನ್ನು ಸೆಲ್ಫ್ ಚೆಕ್ ಮುಖೇನ ಬ್ಯಾಂಕ್‌ನಿಂದ ಪಡೆದಿರುವುದು ಕಂಡು ಬಂದಿದೆ. ಮಂಜೂರಾದ ಮೊತ್ತದ ಪೈಕಿ ರೂ.700/- ಕೊರತೆಯಾದ ಬಗ್ಗೆ ಕಾರಣವೇನೆಂದು 2ನೇ ಎದುರುದಾರರು ಹೇಳಿಲ್ಲ;

10)ದೂರುದಾರರ ಮತ್ತು ಅವರ ಸಹೋದರರ ಬಾಬ್ತು ಜಮೀನಿನಲ್ಲಿ ಹನಿ ನೀರಾವರಿ ಪದ್ಧತಿ ಅಳವಡಿಸಲಾಗಿದೆಯೆಂಬ ಸಮಯಕ್ಕೆ ಮತ್ತು ಚೆಕ್ ಮುಖೇನ ಸಹಾಯ ಧನ ದೂರುದಾರರ ಬ್ಯಾಂಕ್ ಖಾತೆಗೆ ಜಮಾ ಆದ ಸಮಯಕ್ಕೆ ದೂರಿನ 2ನೇ ಎದುರುದಾರರು ಅಂದರೆ 1ನೇ ಆರೋಪಿತ ಸರ್ಕಾರಿ ನೌಕರರು ಬ್ಯಾಡಗಿ ತಾಲ್ಲೂಕ್ ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರು (ಜಿ.ಪಂ) ಆಗಿ ಕರ್ತವ್ಯ ನಿರ್ವಹಿಸುತ್ತಿದ್ದು, ದೂರಿನ 3ನೇ ಎದುರುದಾರರು ಅಂದರೆ 2ನೇ ಆರೋಪಿತ ಸರ್ಕಾರಿ ನೌಕರರು ಸಹಾಯಕ ತೋಟಗಾರಿಕಾ ಅಧಿಕಾರಿ, ರೈತ ಸಂಪರ್ಕ ಕೇಂದ್ರ, ಬ್ಯಾಡಗಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. 3ನೇ ಎದುರುದಾರರು ಸ್ಥಳ ಪರಿಶೀಲನೆ ಮಾಡಿದ ಬಗ್ಗೆ ಸ್ಥಳ ಪರಿಶೀಲನಾ ವರದಿ ಮತ್ತು ಇತರೆ ದಾಖಲೆಗಳನ್ನು ದೃಢೀಕರಿಸಿ, ಸಹಿ ಮಾಡದೇ 2 ಮತ್ತು 3ನೇ ಎದುರುದಾರರುಗಳು ಅಂದರೆ 1 ಮತ್ತು 2ನೇ ಆರೋಪಿತ ಸರ್ಕಾರಿ ನೌಕರರು ಕರ್ತವ್ಯ ಲೋಪ ಮತ್ತು ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು, ಆಕ್ಷೇಪಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, 2 ಮತ್ತು 3ನೇ ಎದುರುದಾರರುಗಳ ಅಂದರೆ 1 ಮತ್ತು 2ನೇ ಆರೋಪಿತ ಸರ್ಕಾರಿ ನೌಕರರು ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

ದೂರುದಾರರಿಗೆ ಹನಿ \ ತುಂತುರು ನೀರಾವರಿ ಸಹಾಯ ಧನ ಮಂಜೂರಾದ ಬಗ್ಗೆ 1 ಮತ್ತು 4ನೇ ಎದುರುದಾರರ ಪಾತ್ರ ಕಂಡು ಬರುವುದಿಲ್ಲವಾದ್ದರಿಂದ, ಸದರಿಯವರುಗಳ ವಿರುದ್ಧದ ನಡವಳಿಯನ್ನು ಕೈಬಿಡಲಾಗಿದೆ.

ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 2 ಮತ್ತು 3ನೇ ಎದುರುದಾರರು ಅಂದರೆ 1 ಮತ್ತು 2ನೇ ಆರೋಪಿತ ಸರ್ಕಾರಿ ನೌಕರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

ಮೂರನೇ (3ನೇ) ಎದುರುದಾರರು ಅಂದರೆ 2ನೇ ಆರೋಪಿತ ಸರ್ಕಾರಿ ನೌಕರರು ದಿನಾಂಕ:30/04/14ರಂದು ಸೇವೆಯಿಂದ ವಯೋ ನಿವೃತ್ತಿ ಹೊಂದಿದ್ದರೂ, ದೂರಿಗೆ ಸಂಬಂಧಪಟ್ಟ ವ್ಯವಹರಣೆಯಲ್ಲಿ ಹಣ ದುರುಪಯೋಗ ಕಂಡು ಬರುವ ಕಾರಣ, ಸದರಿಯವರ ವಿರುದ್ಧದ ವಿಚಾರಣೆಗೆ ಇರುವ ಕಾಲಮಿತಿ ಬಾಧಕವು ಪ್ರತಿಕೂಲವಾಗಿ ಪರಿಣಮಿಸುವುದಿಲ್ಲ.

ಆಸನೌ–1 ಮತ್ತು 2ರವರು ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮ 3(i) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದು, ಆಸನೌ ರವರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲು ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14–ಎರಡಿಯಲ್ಲಿ ಹಾಗೂ ಆಸನೌ–2ರವರು ದಿನಾಂಕ:30/04/2014ರಂದು ನಿವೃತ್ತಿ ಹೊಂದಿರುವುದರಿಂದ, ಕೆಸಿಎಸ್ಆರ್ ನಿಯಮ 214(2)(ಬಿ)(i)ರ ಅಡಿ ಇಲಾಖಾ ವಿಚಾರಣೆಗೆ ಅನುಮತಿಯನ್ನು ನೀಡಿ ಇವರುಗಳ ವಿರುದ್ಧ ಇಲಾಖಾ ವಿಚಾರಣೆಯನ್ನು

ನಡೆಸಲು ಗೌರವಾನ್ವಿತ ಉಪಲೋಕಾಯುಕ್ತರವರು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ ಮೇರೆಗೆ ಸರ್ಕಾರವು ಮೇಲೆ ಉಲ್ಲೇಖಿಸಿದ ಆದೇಶದಲ್ಲಿ ಇಲಾಖಾ ವಿಚಾರಣೆ ನಡೆಸಲು ಅನುಮತಿ ನೀಡಿರುತ್ತದೆ. ಅದರಂತೆ, ಗೌರವಾನ್ವಿತ ಉಪಲೋಕಾಯುಕ್ತರವರು, ಅಪರ ನಿಬಂಧಕರು, ವಿಚಾರಣೆಗಳು-9 ರವರಿಗೆ ವಿಚಾರಣೆ ನಡೆಸಿ ವರದಿಯನ್ನು ಸಲ್ಲಿಸಲು ಸೂಚಿಸಿರುತ್ತಾರೆ. ಆದ್ದರಿಂದ, ಈ ದೋಷಾರೋಪಣೆ.

**5.** Enquiry proceedings is closed against DGO No. 2 Sri.S.B.Patil, Assistant Horticulture Officer (now Retired) (quashed) Enquiry report and recommendation of Hon'ble Upalokayukta was forwarded to the Competent Authority on 2.3.2023.

6. At the stage of recording evidence, DGO-1 has filed application in A. No. 10510/2020 of Hon'ble KSAT, and has obtained an order of stay.

7. Hon'ble KSAT passed order, on 6.4.2021, in Application No. 10510/2020, filed by DGO No. 1 which is as under;

*"ORDER*

*The applications are allowed and the entrustment orders dated 06.06.2019, 18.06.2019 & 24.09.2019 (Annexures-A1 in each applications) respectively issued by the 1st respondent and Articles of Charge dated 10.07.2019, 01,07.2019, 09.07.2019, 01.08.2019, 16.10.2019 and 10.10.2019 (Annexure-A2) respectively, issued by the 5th respondent, are hereby quashed.."*

8. On receipt of the above orders in applications No. 10510/2020, of the Hon'ble KSAT, opinion of CLC was sought and it is opined that the order of the Hon'ble KSAT in application No. 10510/2020 filed

by DGO-1 Sri.Chidanandappa.P.G is fit to be challenged and has filed writ petition No. 102145/2022, before Hon'ble High court of Karnataka. The Hon'ble High court of Karnataka passed orders on 26.6.2023 and rejected the writ petition (arising out of the order dated: 6.4.2021 passed in Applications No.10510/2020 by the Hon'ble KSAT, Belagavi) filed by this institution against DGO No. 1 Sri.Chidanandappa.P.G also. Further Chairman, Legal Cell, Karnataka Lokayukta, Bengaluru, in his letter No. LOK/LC/KAT-302/2020-21, dated: 31.10.2023 has opined that the order of the Hon'ble High court is not fit to be challenged. Therefore, further proceedings against DGO No. 1 is discontinued and inquiry against DGO-1 is also closed.

9. Enquiry Report in respect of DGO No. 2 Sri.S.B.Patil, Assistant Horticulture has already been sent to Disciplinary Authority on 21.2.2023.

10. Hence, report is submitted to Hon’ble Upalokayukta for further action.

29.11.23

(SHUBHAVEER.B)
Additional Registrar Enquiries-9
Karnataka Lokayukta,
Bengaluru.

**i) List of documents**

| | |
|---|---|
| 1 | Note, dtd: 9.11.2021, from Chairman Karnataka Lokayukta, Bengaluru; along with legal opinion, dtd.1.10.2021, and order, dtd: 6.4.2021, in KAT Application No. 10510/2020. |
| 2 | Note, dtd: 31.10.2023, from Chairman Karnataka Lokayukta Bengaluru; along with legal opinion, dtd.20.9.2023, and order, dtd: 26.6.2023, in KAT Application No. 102145/2022. |

29.11.23

(SHUBHAVEER.B)
Additional Registrar Enquiries-9
Karnataka Lokayukta,
Bengaluru.

**ಕರ್ನಾಟಕ ಸರ್ಕಾರ**

**ಕರ್ನಾಟಕ ಲೋಕಾಯುಕ್ತ**

ನಂ:ಉಪಲೋಕ್-1/ಡಿಇ/238/2019/ಎ.ಆರ್.ಇ-09

ಬಹುಮಹಡಿಗಳ ಕಟ್ಟಡ,
ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು-560001.
ದಿನಾಂಕ: 29ನೇ ನವೆಂಬರ್ 2023.

**-:: ಶಿಫಾರಸ್ಸು ::-**

ವಿಷಯ: ಆಪಾದಿತ ಸರ್ಕಾರಿ ನೌಕರರಾದ (1) ಶ್ರೀ. ಚಿದಾನಂದಪ್ಪ, ಪಿ.ಜಿ. ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಬ್ಯಾಡಗಿ(ಪ್ರಸ್ತುತ ತೋಟಗಾರಿಕೆ ಉಪ ನಿರ್ದೇಶಕರು, ಬಳ್ಳಾರಿ) ಮತ್ತು (2) ಶ್ರೀ ಎಸ್. ಬಿ. ಪಾಟೀಲ, ಸಹಾಯಕ ತೋಟಗಾರಿಕೆ ಅಧಿಕಾರಿ(ನಿವೃತ್ತ) ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

ಉಲ್ಲೇಖ: (1) ಆದೇಶ ಸಂಖ್ಯೆ: ತೋಇ 93 ತೋಸೇಪ 2019, ಬೆಂಗಳೂರು, ದಿನಾಂಕ: 24/09/2019.
(2) ಉಪಲೋಕಾಯುಕ್ತ, ಕರ್ನಾಟಕ ರಾಜ್ಯ, ಬೆಂಗಳೂರು ರವರ ನಾಮನಿರ್ದೇಶನ ಆದೇಶ ಸಂಖ್ಯೆ. ಉಪಲೋಕ್-1/ಡಿಇ/238/2019, ಬೆಂಗಳೂರು, ದಿನಾಂಕ: 01/10/2019.
(3) ಅಪರ ನಿಬಂಧಕರು ವಿಚಾರಣೆಗಳು-09, ಕರ್ನಾಟಕ ಲೋಕಾಯುಕ್ತ ಬೆಂಗಳೂರು ರವರ ವಿಚಾರಣಾ ವರದಿ ದಿನಾಂಕ: 29/11/2023.

*****

ಸರ್ಕಾರದ ಆದೇಶ ದಿನಾಂಕ: 24/09/2019ರಂತೆ (1) ಶ್ರೀ. ಚಿದಾನಂದಪ್ಪ, ಪಿ.ಜಿ. ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಬ್ಯಾಡಗಿ(ಪ್ರಸ್ತುತ ತೋಟಗಾರಿಕೆ ಉಪ ನಿರ್ದೇಶಕರು, ಬಳ್ಳಾರಿ) ಮತ್ತು (2) ಶ್ರೀ ಎಸ್. ಬಿ.ಪಾಟೀಲ, ಸಹಾಯಕ ತೋಟಗಾರಿಕೆ ಅಧಿಕಾರಿ(ನಿವೃತ್ತ) (ಇನ್ನು ಮುಂದೆ ಆಪಾದಿತ ಸರ್ಕಾರಿ ನೌಕರರು-1 ಮತ್ತು 2 ಅಂದರೆ ಚಿಕ್ಕದಾಗಿ 'ಆ.ಸ.ನೌಕರರು-1 ಮತ್ತು 2' ಎಂದು ಸಂಭೋದಿಸಲಾಗುವುದು) ರವರ ವಿರುದ್ಧ ಶಿಸ್ತು ಪ್ರಕ್ರಿಯೆಯನ್ನು ಕೈಗೊಂಡು ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಈ ಸಂಸ್ಥೆಗೆ ಇಲಾಖಾ ವಿಚಾರಣೆಯನ್ನು ವಹಿಸಿರುತ್ತದೆ.

2. ಈ ಸಂಸ್ಥೆಯ ನಾಮನಿರ್ದೇಶನ ಆದೇಶ ಸಂಖ್ಯೆ: ಉಪಲೋಕ್-1/ಡಿಇ/238/2019, ಬೆಂಗಳೂರು, ದಿನಾಂಕ: 01/10/2019ರ ರೀತ್ಯಾ ಅಪರ ನಿಬಂಧಕರು ವಿಚಾರಣೆಗಳು-09 ರವರಿಗೆ ಆ.ಸ.ನೌಕರರ ವಿರುದ್ಧ

ದೋಷಾರೋಪಣಾ ಪಟ್ಟಿ ತಯಾರು ಮಾಡಿ, ವಿಚಾರಣೆ ನಡೆಸಿ, ವರದಿ ಸಲ್ಲಿಸುವಂತೆ ಆದೇಶ ಹೊರಡಿಸಲಾಗಿರುತ್ತದೆ.

3. ಆ.ಸ.ನೌಕರರಾದ (1) ಶ್ರೀ. ಚಿದಾನಂದಪ್ಪ, ಪಿ.ಜಿ. ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಬ್ಯಾಡಗಿ(ಪ್ರಸ್ತುತ ತೋಟಗಾರಿಕೆ ಉಪ ನಿರ್ದೇಶಕರು, ಬಳ್ಳಾರಿ) ಮತ್ತು (2) ಶ್ರೀ ಎಸ್. ಬಿ.ಪಾಟೀಲ, ಸಹಾಯಕ ತೋಟಗಾರಿಕೆ ಅಧಿಕಾರಿ(ನಿವೃತ್ತ)ರವರ ವಿರುದ್ಧ ಈ ಕೆಳಗಿನ ದೋಷಾರೋಪಣೆಗಾಗಿ ಇಲಾಖಾ ವಿಚಾರಣೆಯನ್ನು ನಡೆಸಲಾಯಿತು.

ANNEXURE-I
CHARGE

ಆಸನೌ ನಂ;1– ಶ್ರೀ.ಚಿದಾನಂದಪ್ಪ.ಪಿ.ಜಿ., ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಬ್ಯಾಡಗಿ, (ಪ್ರಸ್ತುತ ತೋಟಗಾರಿಕೆ ಉಪ ನಿರ್ದೇಶಕರು, ಬಳ್ಳಾರಿ) ಹಾಗೂ (2) ಶ್ರೀ.ಎಸ್.ಬಿ.ಪಾಟೀಲ, ಸಹಾಯಕ ತೋಟಗಾರಿಕೆ ಅಧಿಕಾರಿ (ನಿವೃತ್ತ) ಆದ ನೀವು

1) ದೂರುದಾರರು ಮತ್ತು ಅವರ ಸಹೋದರ ಎಂದು ಹೇಳಲಾದ ಶ್ರೀ.ಶೇಖರಯ್ಯ ಸಾಲಿ ಹೆಸರಿನಲ್ಲಿ ಬ್ಯಾಡಗಿ ತಾಲ್ಲೂಕ್ ಕಾಗಿನೆಲೆ ಹೋಬಳಿ ಕೆರವಡಿ ಗ್ರಾಮದ ಸರ್ವೆ ನಂ.66/2ಸಿ (66/2ಕ) ರಲ್ಲಿ 3 ಎಕರೆ 15 ಗುಂಟೆ ಜಮೀನಿರುವುದು 2010–11ನೇ ಸಾಲಿನ ಪಹಣಿ ಮತ್ತು ಖಾತೆ ಉತಾರದಲ್ಲಿ ಕಂಡು ಬಂದಿದೆ. ಸಹಾಯ ಧನದ ಮೊತ್ತವನ್ನು \ ಚೆಕ್ ಅನ್ನು ದೂರುದಾರರ ಹೆಸರಿನಲ್ಲಿ ನೀಡಲು ಒಪ್ಪಿಗೆ ಇದೆಯೆಂದು ಶ್ರೀ.ಶೇಖರಯ್ಯ ಸಾಲಿ ರವರು ಬರೆದುಕೊಟ್ಟಿದ್ದಾರೆನ್ನಲಾದ ಒಪ್ಪಿಗೆ ಪತ್ರ ಕಡತದಲ್ಲಿದ್ದು, ಸದರಿ ಒಪ್ಪಿಗೆ ಪತ್ರದಲ್ಲಿ ಸ್ಥಳ ಮತ್ತು ದಿನಾಂಕ ನಮೂದಿಸಲು ಮೀಸಲಿರಿಸಿದ ಜಾಗದಲ್ಲಿ ಸ್ಥಳ ಮತ್ತು ದಿನಾಂಕ ನಮೂದಿಸದೇ ಇರುವುದು ಹಾಗೂ ಸದರಿ ಒಪ್ಪಿಗೆ ಪತ್ರವನ್ನು ಯಾವ ಅಧಿಕಾರಿಗೆ ನೀಡಿದೆ ಎಂದು ನಮೂದಿಸದೇ ಇರುವುದು ಕಂಡು ಬಂದಿದ್ದು ಆ.ಸ.ನೌ–1 ಮತ್ತು 2 ಆದ ನೀವು ಕೇಂದ್ರ ಪುರಸ್ಕೃತ ರಾಷ್ಟ್ರೀಯ ಸೂಕ್ಷ್ಮ ನೀರಾವರಿ ಮಿಷನ್ ಯೋಜನೆಯಡಿಯಲ್ಲಿ ಇರುವ ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿ ಕರ್ತವ್ಯಲೋಪವೆಸಗಿರುತ್ತೀರಿ

2)ದೂರುದಾರರು ತಮ್ಮ ಬಾಬ್ತು ಕೆರವಡಿ ಗ್ರಾಮದ ಸರ್ವೆ ನಂ.66/2ಸಿ ರಲ್ಲಿ ಹನಿ \ ತುಂತುರು ನೀರಾವರಿ ಪದ್ಧತಿ ಅಳವಡಿಸಲು ಕೋರಿ ಸಲ್ಲಿಸಿದ್ದಾರೆಂದು ಹೇಳಿದ ಅರ್ಜಿ (ಅರ್ಜಿ ಸಂಖ್ಯೆ:269459, ದಿನಾಂಕ:25/03/11)ಯ ಪ್ರತಿಯನ್ನು ದೂರುದಾರರು ಹಾಜರುಪಡಿಸಿದ್ದಾರೆ. ತಾಲ್ಲೂಕ್ ಸಹಾಯಕ ತೋಟಗಾರಿಕೆ ನಿರ್ದೇಶಕರು\ ಸಹಾಯಕ ತೋಟಗಾರಿಕೆ ನಿರ್ದೇಶಕರು, ದೂರುದಾರರ ಅರ್ಜಿ ಮತ್ತು ದಾಖಲೆಗಳನ್ನು ಪರಿಶೀಲಿಸಿ, ಅವರ ಹೆಸರನ್ನು ಜೇಷ್ಠತಾ ವಹಿಯಲ್ಲಿ ನಮೂದಿಸಿದ ಬಗ್ಗೆ ದಾಖಲೆಗಳು ಲಭ್ಯವಿಲ್ಲ. ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ) ರವರು ಅರ್ಜಿ ಮತ್ತು ದಾಖಲೆಗಳನ್ನು ಪರಿಶೀಲಿಸಿ, ತಾಲ್ಲೂಕ್‌ವಾರು ಜೇಷ್ಠತಾ ಪಟ್ಟಿಯನ್ನು ಅನುಮೋದಿಸಿದ ಬಗ್ಗೆ ದಾಖಲೆಗಳು ಲಭ್ಯವಿಲ್ಲ. ಆದರೆ, ಜೇಷ್ಠತಾ ಕ್ರಮ ಸಂಖ್ಯೆಯು ಪೂರ್ವಭಾವಿ ಮಂಜೂರಾತಿ ಪತ್ರದಲ್ಲಿ ನಮೂದಾಗಿರುವುದು ಕಂಡು ಬಂದಿದ್ದು ಆ.ಸ.ನೌ–1 ಮತ್ತು 2 ಆದ ನೀವು ಕೇಂದ್ರ ಪುರಸ್ಕೃತ ರಾಷ್ಟ್ರೀಯ ಸೂಕ್ಷ್ಮ ನೀರಾವರಿ ಮಿಷನ್ ಯೋಜನೆಯಡಿಯಲ್ಲಿ ಇರುವ ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿ ಕರ್ತವ್ಯಲೋಪವೆಸಗಿರುತ್ತೀರಿ

3)ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ) ರವರು ಅನುಮೋದಿತ ಕ್ರಿಯಾ ಯೋಜನೆ ಮಿತಿಯಲ್ಲಿ ಫಲಾನುಭವಿಗೆ ಕಾರ್ಯಾದೇಶ ನೀಡಿರುವ ದಾಖಲೆಯಿಲ್ಲ. ದೂರುದಾರರು ಮತ್ತು ಅವರ ಸಹೋದರನ ಬಾಬ್ತು ಜಮೀನಿನಲ್ಲಿ ಹನಿ \ ತುಂತುರು ನೀರಾವರಿ ಪದ್ಧತಿಯನ್ನು ಯಾವ ದಿನದಂದು ಅಳವಡಿಸಲಾಗಿದೆಯೆಂಬ ಬಗ್ಗೆ ದಾಖಲೆಯಿಲ್ಲ. ದೂರುದಾರರಿಗೆ ಹನಿ ನೀರಾವರಿ ಉಪಕರಣ ನಿರ್ವಹಿಸುವ ಬಗ್ಗೆ ತರಭೇತಿ ನೀಡಿದೆಯೆಂದು ಹೇಳಲಾಗಿದ್ದು, ದೂರುದಾರರಿಗೆ ತರಬೇತಿ ನೀಡಿರುವ ಬಗ್ಗೆ ದಾಖಲೆಗಳಿಲ್ಲ; ಆ.ಸ.ನೌ–1 ಮತ್ತು 2 ಆದ ನೀವು ಕೇಂದ್ರ ಪುರಸ್ಕೃತ ರಾಷ್ಟ್ರೀಯ ಸೂಕ್ಷ್ಮ ನೀರಾವರಿ ಮಿಷನ್ ಯೋಜನೆಯಡಿಯಲ್ಲಿ ಇರುವ ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿ ಕರ್ತವ್ಯಲೋಪವೆಸಗಿರುತ್ತೀರಿ

4)ದೂರುದಾರರ ಮತ್ತು ಅವರ ಸಹೋದರನ ಬಾಬ್ತು ಜಮೀನಿನಲ್ಲಿ ಕೊಳವೆ ಬಾವಿ ಇದೆಯೆಂದು ದಿ:25/03/11ರ ಅರ್ಜಿಯಲ್ಲಿ ಹೇಳಿದ್ದು, ಜಮೀನಿನಲ್ಲಿ ಕೊಳವೆ ಬಾವಿ ಇದ್ದ ಬಗ್ಗೆ ಭಾವಚಿತ್ರವಿಲ್ಲ. ಶ್ರೀ ವೀರಭದ್ರೇಶ್ವರ ಏಜೆನ್ಸಿಸ್ ರವರು ದೂರುದಾರರ ಮತ್ತು ಅವರ ಸಹೋದರನ ಬಾಬ್ತು ಜಮೀನಿನಲ್ಲಿ ತುಂತುರು \ ಹನಿ ನೀರಾವರಿ ಪರಿಕರಗಳನ್ನು ಅಳವಡಿಸಿದ ಬಾಬ್ತು, ಕಾಮಗಾರಿ ಮುಕ್ತಾಯದ ವರದಿ ಮತ್ತು ಉಪಕರಣಗಳ ಗ್ಯಾರಂಟಿ ಪತ್ರಗಳಲ್ಲಿ ದಿನಾಂಕಗಳು ನಮೂದಾಗಿಲ್ಲ; ಆ.ಸ.ನೌ–1 ಮತ್ತು 2 ಆದ ನೀವು ಕೇಂದ್ರ ಪುರಸ್ಕೃತ ರಾಷ್ಟ್ರೀಯ ಸೂಕ್ಷ್ಮ ನೀರಾವರಿ ಮಿಷನ್ ಯೋಜನೆಯಡಿಯಲ್ಲಿ ಇರುವ ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿ ಕರ್ತವ್ಯಲೋಪವೆಸಗಿರುತ್ತೀರಿ

5)ದೂರುದಾರರ ಮತ್ತು ಅವರ ಸಹೋದರನ ಬಾಬ್ತು ಜಮೀನಿನಲ್ಲಿ ಅಳವಡಿಸಲಾಗಿದೆಯೆಂದು ಹೇಳಿದ ಹನಿ ನೀರಾವರಿ ಉಪಕರಣ ಮತ್ತು ಇತರೆ ಸಾಧನಗಳ ಕೊಟೇಷನ್ ದಿನಾಂಕ:25/03/11ರಲ್ಲಿ '45,588/– ಆಗಿದ್ದು, ಅವರಿಗೆ ಸಹಾಯ ಧನದ ಮೊತ್ತ ಒಟ್ಟು '32,500/– ಮಂಜೂರಾಗಿ ಬಿಲ್ ಮಾಡಿದೆಯೆಂದು ಕೊಟೇಷನ್ ಮೇಲೆ ಮತ್ತು ಸಾದಿಲ್ವಾರು ಬಿಲ್ಲುಗಳಲ್ಲಿ ಆ.ಸ.ನೌ–1 ಸಹಿ ಮಾಡಿದ್ದೀರಿ. ಆದರೆ, ದೂರುದಾರರ ಬಾಬ್ತು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಡಗಿ ಶಾಖೆಯ ಖಾತೆ ಸಂಖ್ಯೆ:600302010002905ಗೆ ದಿನಾಂಕ:30/11/11ರಂದು '31,800/– ಮಾತ್ರ ಜಮಾ ಆಗಿ, ಅದೇ ದಿನ ಸದರಿ ಮೊತ್ತವನ್ನು ಸೆಲ್ಫ್ ಚೆಕ್ ಮುಖೇನ ಬ್ಯಾಂಕ್‌ನಿಂದ ಪಡೆದಿರುವುದು ಕಂಡು ಬಂದಿದೆ. ಮಂಜೂರಾದ ಮೊತ್ತದ ಪೈಕಿ '700/– ಕೊರತೆಯಾದ ಬಗ್ಗೆ ಕಾರಣವೇನೆಂದು ಸಹ ಹೇಳಿಲ್ಲ; ಆ.ಸ.ನೌ–1 ಮತ್ತು 2 ಆದ ನೀವು ಕೇಂದ್ರ ಪುರಸ್ಕೃತ ರಾಷ್ಟ್ರೀಯ ಸೂಕ್ಷ್ಮ ನೀರಾವರಿ ಮಿಷನ್ ಯೋಜನೆಯಡಿಯಲ್ಲಿ ಇರುವ ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿ ಕರ್ತವ್ಯಲೋಪವೆಸಗಿರುತ್ತೀರಿ

6)ದೂರುದಾರರ ಮತ್ತು ಅವರ ಸಹೋದರನ ಬಾಬ್ತು ಜಮೀನಿನಲ್ಲಿ ಹನಿ ನೀರಾವರಿ ಪದ್ಧತಿ ಅಳವಡಿಸಲಾಗಿದೆಯೆಂಬ ಸಮಯಕ್ಕೆ ಮತ್ತು ಚೆಕ್ ಮುಖೇನ ಸಹಾಯ ಧನ ದೂರುದಾರರ ಬ್ಯಾಂಕ್ ಖಾತೆಗೆ ಜಮಾ ಆದ ಸಮಯಕ್ಕೆ 1ನೇ ಆರೋಪಿತ ಸರ್ಕಾರಿ ನೌಕರರು ಆದ ನೀವು ಬ್ಯಾಡಗಿ ತಾಲ್ಲೂಕ್ ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರು (ಜಿ.ಪಂ) ಆಗಿ ಕರ್ತವ್ಯ ನಿರ್ವಹಿಸುತ್ತಿದ್ದು, 2ನೇ ಆರೋಪಿತ ಸರ್ಕಾರಿ ನೌಕರರು ಆದ ನೀವು ಸಹಾಯಕ ತೋಟಗಾರಿಕಾ ಅಧಿಕಾರಿ, ರೈತ ಸಂಪರ್ಕ ಕೇಂದ್ರ, ಬ್ಯಾಡಗಿಯಲ್ಲಿ ಕರ್ತವ್ಯ ನಿರ್ವಹಿಸಿದ್ದು, 2ನೇ ಆರೋಪಿತ ಸರ್ಕಾರಿ ನೌಕರರು ಆದ ನೀವು ಸ್ಥಳ ಪರಿಶೀಲನೆ ಮಾಡಿದ ಬಗ್ಗೆ ಸ್ಥಳ ಪರಿಶೀಲನಾ ವರದಿ ಮತ್ತು ಇತರೆ ದಾಖಲೆಗಳನ್ನು ದೃಢೀಕರಿಸಿ, ಸಹಿ ಮಾಡದೇ ಆ.ಸ.ನೌ–1 ಮತ್ತು 2 ಆದ ನೀವು ಕೇಂದ್ರ ಪುರಸ್ಕೃತ ರಾಷ್ಟ್ರೀಯ ಸೂಕ್ಷ್ಮ ನೀರಾವರಿ ಮಿಷನ್ ಯೋಜನೆಯಡಿಯಲ್ಲಿ ಇರುವ ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿ ಕರ್ತವ್ಯಲೋಪವೆಸಗಿರುತ್ತೀರಿ

ಆದ್ದರಿಂದ, ಆ.ಸ.ನೌಕರರಾದ 1 ಮತ್ತು 2 ಆದ ನೀವು ಕರ್ತವ್ಯಲೋಪವೆಸಗಿ ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (i) ರಿಂದ (iii) ರಡಿಯಲ್ಲಿ ದುರ್ನಡತೆಯನ್ನೆಸಗಿದ್ದೀರಿ.

4. ಆ.ಸ.ನೌಕರರು–2 ಆದ ಶ್ರೀ ಎಸ್. ಬಿ.ಪಾಟೀಲ, ಸಹಾಯಕ ತೋಟಗಾರಿಕೆ ಅಧಿಕಾರಿ(ನಿವೃತ್ತ)ರವರ ವಿಚಾರಣಾ ವರದಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ದಿನಾಂಕ: 21/02/2023 ರಂದು ಕಳುಹಿಸಲಾಗಿದೆ.

5. ಆ.ಸ.ನೌಕರರು–1 ರವರು ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿ ಮುಂದೆ ಅಪ್ಲಿಕೇಷನ್ ನಂ.10510/2020 ಅನ್ನು ಸಲ್ಲಿಸಿರುತ್ತಾರೆ. ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿ, ಆ.ಸ.ನೌಕರರು ಸಲ್ಲಿಸಿರುವ ಅಪ್ಲಿಕೇಷನ್ ಸಂಖ್ಯೆ: 10510/2020 ಅನ್ನು ಅನುಮತಿಸಿ (allowed) ಸರ್ಕಾರಿ ಆದೇಶ ಸಂಖ್ಯೆ: ತೋಇ 93 ತೋಸೇಪ 2019, ಬೆಂಗಳೂರು, ದಿನಾಂಕ: 24/09/2019 ಮತ್ತು ದೋಷಾರೋಪಣೆ ಪಟ್ಟಿ ದಿನಾಂಕ: 16/10/2019ನ್ನು ರದ್ದುಗೊಳಿಸಿ ಆದೇಶಿಸಿದೆ.

5. ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿ ಅಪ್ಲಿಕೇಷನ್ ಸಂಖ್ಯೆ: 10510/2020 ರಲ್ಲಿ ಮಾಡಿದ ಆದೇಶವನ್ನು ಗೌರವಾನ್ವಿತ ಉಚ್ಛ ನ್ಯಾಯಾಲಯದ ಡಬ್ಲ್ಯೂ.ಪಿ.ಸಂಖ್ಯೆ:102145/2022ರಲ್ಲಿ ಪ್ರಶ್ನಿಸಿದ್ದು, ಗೌರವಾನ್ವಿತ ಉಚ್ಛ ನ್ಯಾಯಾಲಯವು ಸದರಿ ಡಬ್ಲ್ಯೂ.ಪಿ.ಸಂಖ್ಯೆ:102145/2022 ಅನ್ನು ತಿರಸ್ಕರಿಸಿ ಆದೇಶಿಸಿರುತ್ತದೆ. ಮುಂದುವರೆದು, ಈ ಸಂಸ್ಥೆಯು ಇದೊಂದು ಪ್ರಶ್ನಿಸಲು ಸೂಕ್ತವಾಗಿಲ್ಲದ ಪ್ರಕರಣ (not fit) ಎಂದು ತೀರ್ಮಾನಿಸಿರುವ ಪ್ರಯುಕ್ತ ಈ ವಿಚಾರಣೆಯನ್ನು ಅಂದರೆ, (1) ಶ್ರೀ. ಚಿದಾನಂದಪ್ಪ, ಪಿ.ಜಿ. ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಬ್ಯಾಡಗಿ(ಪ್ರಸ್ತುತ ತೋಟಗಾರಿಕೆ ಉಪ ನಿರ್ದೇಶಕರು, ಬಳ್ಳಾರಿ)ರವರ ವಿರುದ್ಧದ ವಿಚಾರಣೆಯನ್ನು ಮುಕ್ತಾಯಗೊಳಿಸಲಾಗಿದೆ (closed) ಎಂದು ಪರಿಗಣಿಸಲಾಗುತ್ತಿದೆ.

ಸದರಿ ವಿಷಯದಲ್ಲಿ ತೆಗೆದುಕೊಂಡ ಕ್ರಮವನ್ನು ಈ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

ಸಂಬಂಧಪಟ್ಟ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿದೆ.

29/11/23

(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)
ಉಪಲೋಕಾಯುಕ್ತ–1,
ಕರ್ನಾಟಕ ರಾಜ್ಯ.